# ಕುವೆಂಪು ಕಂಡಂತೆ ಶ್ರೀರಾಮಕೃಷ್ಣ

* ಡಾ. ಎಚ್. ಎನ್. ಮುರಳೀಧರ

ಕುವೆಂಪು ಅವರು ಶ್ರೀರಾಮಕೃಷ್ಣರನ್ನು ಸ್ವೀಕರಿಸಿದ ಬಗೆಯನ್ನು ಹಲವು ನೆಲೆಗಳಲ್ಲಿ ಪರಿಶೀಲಿಸಬೇಕಾದ ಅಗತ್ಯವಿದೆ. ಶ್ರೀರಾಮಕೃಷ್ಣರಿಗೆ ಸಂಬಂಧಿಸಿದಂತೆ ಒಂದೆಡೆ ಕುವೆಂಪು ಅವರ ವೈಯಕ್ತಿಕ ಬದುಕು, ಸಾಧನೆಯ ಸ್ವರೂಪ, ಜೀವನದೃಷ್ಟಿ ರೂಪುಗೊಂಡ ಬಗೆ ಮೊದಲಾದುವಿದ್ದರೆ, ಇನ್ನೊಂದೆಡೆ ಶ್ರೀರಾಮಕೃಷ್ಣರನ್ನು ಕುರಿತ ಅವರ ಸಾಹಿತ್ಯ, ಈ ಹಿನ್ನೆಲೆಯಲ್ಲಿ ಅವರ ಸಾಹಿತ್ಯ ಸೃಷ್ಟಿಗೆ ಒದಗಿಬಂದ ಆಯಾಮಗಳು ನಮ್ಮ ಮುಂದೆ ನಿಲ್ಲುತ್ತವೆ. ಮೂಲಭೂತವಾಗಿ ಇವೆಲ್ಲ ಒಂದೇ ಸಂಗತಿಯ ಬೇರೆ ಬೇರೆ ಅಂಗಗಳಾದರೂ ಗ್ರಹಿಕೆಯ ಸೌಕರ್ಯಕ್ಕಾಗಿ ಇಲ್ಲಿ ಇವನ್ನು ಪ್ರತ್ಯೇಕವಾಗಿ ಪರಿಗಣಿಸಿದೆ.

ಶ್ರೀರಾಮಕೃಷ್ಣ-ವಿವೇಕಾನಂದರು ಕುವೆಂಪು ಅವರ ಬದುಕನ್ನು ಪ್ರವೇಶಿಸಿದ ಬಗೆ ಈಗ ಇತಿಹಾಸದ ಭಾಗವಾಗಿದೆ. ಕುವೆಂಪು ಅವರ ದಿನಚರಿಯ ಭಾಗಗಳನ್ನು ಒಳಗೊಂಡ ಆತ್ಮಚರಿತ್ರೆ ನೆನಪಿನ ದೋಣಿಯಲ್ಲಿ (ಉದಯರವಿ ಪ್ರಕಾಶನ, ಮೈಸೂರು, ೧೯೮೦) ಪ್ರಕಟವಾದ ಮೇಲಂತೂ ಈ ಬಗೆಗೆ ಇನ್ನೇನೂ ಹೇಳುವುದು ಉಳಿದಿಲ್ಲವೆಂಬಷ್ಟು ಮಟ್ಟಿಗೆ ವಿಷಯಗಳು ಸ್ಪಷ್ಟವಾಗಿವೆ. ಶ್ರೀರಾಮಕೃಷ್ಣರ ಜೀವನಚರಿತ್ರೆ ಮೊದಲ ಬಾರಿಗೆ ತಮ್ಮ ಕೈಗೆ ಬಂದ ಸಂದರ್ಭವನ್ನು ಕುವೆಂಪು ಅತ್ಯಂತ ಭಾವುಕವಾಗಿ ವರ್ಣಿಸಿಕೊಂಡಿದ್ದಾರೆ:

"...ಅಂದು [ಜನವರಿ ೨೫, ೧೯೨೪] ರಾತ್ರಿ ಸಮಾರಂಭದ ಕಾರ್ಯಕ್ರಮಗಳೆಲ್ಲ ಮುಗಿದ ಅನಂತರ ನಾನು ಆ ಕೊಠಡಿಯಲ್ಲಿದ್ದ ಅವರ [ಭೂಪಾಳಂ ಚಂದ್ರಶೇಖರಯ್ಯ ಎಂಬುವರ] ಮೇಜಿನ ಮೇಲೆ ನನ್ನ ಜೀವನನೌಕೆಯ ಕರ್ಣಧಾರಸ್ವರೂಪವಾಗಲಿದ್ದ ಒಂದು ಮಹಾಪೂಜ್ಯ ಅನರ್ಘ್ಯವಸ್ತುವನ್ನು ಸಂದರ್ಶಿಸಿದೆ : *Life of Sri Ramakrishna*, Compiled from various authentic sources. ಅದು ಆ ವರ್ಷವೆ ಎಂದರೆ ೧೯೨೫ರಲ್ಲಿಯೆ ಹಿಮಾಲಯದಲ್ಲಿರುವ ಆಲ್ಮೋರದ ಮಾಯಾವತಿಯ ಅದ್ವೈತ ಆಶ್ರಮದಿಂದ ಸ್ವಾಮಿ ಮಾಧವಾನಂದರ ಹೆಸರಿನಲ್ಲಿ ಪ್ರಕಟವಾಗಿತ್ತು. ಡೆಮಿ ಆಕಾರದ ೭೬೫ ಪುಟಗಳ ಬೃಹತ್‌ಗಾತ್ರದ ಹೆಬ್ಬೊತ್ತಗೆ: ನನ್ನ ಪ್ರಜ್ಞೆಗೆ ಅರಿಯದಂತೆಯೆ ದೇವದೇವ ಮಹಾದೇವನ ಪುಸ್ತಕರೂಪಿ ಕೃಪಾಹಸ್ತ ತನ್ನ ಕಂದನನ್ನೆತ್ತಿ ಎದೆಗಪ್ಪಿಕೊಳ್ಳಲು ಕೈಚಾಚಿದಂತಿತ್ತು! ಶ್ರೀತಾಯಿಯ ಕರುಣೆ ಮೈದಾಳಿದಂತಿತ್ತು!" (ನೆನಪಿನ ದೋಣಿಯಲ್ಲಿ, ೧೯೮೩, ಪು. ೩೪೩-೪)



ಚಿತ್ರಕೃಪೆ : ಕೃಪಾಕರ ಸೇನಾನಿ

ಮರುದಿನ ಆ ಮಿತ್ರರು ಆ ಗ್ರಂಥವನ್ನು ಕುವೆಂಪು ಅವರಿಗೆ ಉಪಾಯನವಾಗಿ ನೀಡಿದ್ದರ ಬಗೆಗೆ ಅವರಿಂದ ಹೊಮ್ಮಿರುವ ಉದ್ಗಾರವಿದು : "ಅಂದು ನನ್ನ ಮಿತ್ರರಿಗಾಗಲಿ ನನಗಾಗಲಿ ನಡೆದ ಆ ಘಟನೆಯ ದೈವೀ ಮಹತ್ತಾಗಲಿ ಮತ್ತು ಅದರಿಂದ ಆಗಲಿರುವ ಪರಿಣಾಮದ ಭೂಮತ್ವವಾಗಲಿ ಸ್ವಲ್ಪವಾದರೂ ಪ್ರಜ್ಞಾದಿಗಂತಗೋಚರವೂ ಆಗಿರಲಿಲ್ಲವಲ್ಲಾ!" (ಅದೇ, ಪು. ೩೪೫)

ಶ್ರೀರಾಮಕೃಷ್ಣರನ್ನು ಕಾಣುವ ದೃಷ್ಟಿಕೋನಗಳನ್ನು ಸ್ಥೂಲವಾಗಿ 'ಒಳಗಿನಿಂದ ಶ್ರೀರಾಮಕೃಷ್ಣ' ಮತ್ತು 'ಹೊರಗಿನಿಂದ ಶ್ರೀರಾಮಕೃಷ್ಣ' ಎಂದು ಎರಡು ಬಗೆಯಾಗಿ ವಿಂಗಡಿಸಿಕೊಳ್ಳಬಹುದು. ಮೊದಲನೆಯ ದೃಷ್ಟಿಗೆ ಶ್ರೀರಾಮಕೃಷ್ಣರು ಉಳಿದೆಲ್ಲಕ್ಕಿಂತ ಹೆಚ್ಚಾಗಿ ಇಷ್ಟದೈವ; ಎರಡನೆಯ ದೃಷ್ಟಿಯಲ್ಲಿ

**ಲೇಖಕರು ಬೆಂಗಳೂರಿನಲ್ಲಿ ವಿ.ವಿ.ಎಸ್ ಪದವಿ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾಗಿದ್ದಾರೆ. ರಾಮಕೃಷ್ಣ-ವಿವೇಕಾನಂದ ಸಾಹಿತ್ಯದಲ್ಲಿಯೂ ಪರಿಣತರು. ಅವರ ಅನೇಕ ಕಾವ್ಯಗಳೂ, ಅನುವಾದಗಳೂ ಪ್ರಕಟವಾಗಿವೆ.**

ಸಂತ, ಮಹಾತ್ಮ, ಅನುಭಾವಿ ಇತ್ಯಾದಿ. ಮೊದಲನೆಯದು ರಾಮಕೃಷ್ಣ ಸಂಪ್ರದಾಯದ ದೃಷ್ಟಿಕೋನವೂ ಹೌದು. ಕುವೆಂಪು ಸ್ಪಷ್ಟವಾಗಿ ಶ್ರೀರಾಮಕೃಷ್ಣರನ್ನು 'ಒಳಗಿನಿಂದ' ಕಂಡವರು. ಅವರ ಆತ್ಮಚರಿತ್ರೆಯ ಪುಟಪುಟಗಳಲ್ಲೂ ಈ ಸಂಗತಿ ವಿದಿತವಾಗುತ್ತದೆ. ಅಲ್ಲಿ ಶ್ರೀರಾಮಕೃಷ್ಣರನ್ನು ಕುರಿತ ಪ್ರಾರ್ಥನೆಗಳಿವೆ, ಸ್ತೋತ್ರಗಳಿವೆ, ಕೃಪಾಭಿಕ್ಷೆಯಿದೆ, ತಪ್ಪೊಪ್ಪಿಗೆಯಿದೆ, ರಾಮಕೃಷ್ಣಸಂಪ್ರದಾಯದ ಜೈಕಾರಗಳೂ ಇವೆ. ಶ್ರೀರಾಮಕೃಷ್ಣರನ್ನು ತಮ್ಮ ಜೀವನದ ಆಧಾರಶ್ರುತಿಯಾಗಿ ಸ್ವೀಕರಿಸಿರುವುದಕ್ಕೆ ಹೆಜ್ಜೆಹೆಜ್ಜೆಗೂ ನಿದರ್ಶನಗಳಿವೆ. ಮೇಲ್ನೋಟಕ್ಕೆ ಕೇವಲ ಪ್ರಾರ್ಥನೆಯೆಂದು ತೋರುವ ಎಷ್ಟೋ ಕವನಗಳ ಗುರಿ ಶ್ರೀರಾಮಕೃಷ್ಣರೆನ್ನುವುದು ಇಲ್ಲಿ ಸ್ಪಷ್ಟವಾಗುತ್ತದೆ (ಉದಾಹರಣೆಗೆ, 'ಅಗಣಿತ ತಾರಾಗಣಗಳ ನಡುವೆ...' ಎಂಬ ಕವಿತೆ). ಈ ಹಿನ್ನೆಲೆಯಲ್ಲಿ ಈ 'ರಾಮಕೃಷ್ಣ ದೃಷ್ಟಿಕೋನ' ಎನ್ನುವುದು 'ಕುವೆಂಪು ದರ್ಶನ'ವನ್ನು ರೂಪಿಸಿರುವ ಪ್ರಧಾನ ಸ್ರೋತಗಳಲ್ಲಿ ಒಂದಾಗಿದೆ.

> ❂ ಕುವೆಂಪು ಸ್ಪಷ್ಟವಾಗಿ ಶ್ರೀರಾಮಕೃಷ್ಣರನ್ನು 'ಒಳಗಿನಿಂದ' ಕಂಡವರು. ಅವರ ಆತ್ಮಚರಿತ್ರೆಯ ಪುಟಪುಟಗಳಲ್ಲೂ ಈ ಸಂಗತಿ ವಿದಿತವಾಗುತ್ತದೆ. ಅಲ್ಲಿ ಶ್ರೀರಾಮಕೃಷ್ಣರನ್ನು ಕುರಿತ ಪ್ರಾರ್ಥನೆಗಳಿವೆ, ಸ್ತೋತ್ರಗಳಿವೆ, ಕೃಪಾಭಿಕ್ಷೆಯಿದೆ, ತಪ್ಪೊಪ್ಪಿಗೆಯಿದೆ, ರಾಮಕೃಷ್ಣಸಂಪ್ರದಾಯದ ಜೈಕಾರಗಳೂ ಇವೆ. ಶ್ರೀರಾಮಕೃಷ್ಣರನ್ನು ತಮ್ಮ ಜೀವನದ ಆಧಾರಶ್ರುತಿಯಾಗಿ ಸ್ವೀಕರಿಸಿರುವುದಕ್ಕೆ ಹೆಜ್ಜೆ ಹೆಜ್ಜೆಗೂ ನಿದರ್ಶನಗಳಿವೆ. ❂

ಕುವೆಂಪು ಸಾಹಿತ್ಯದಲ್ಲಿ ಮುಖ್ಯವಾಗಿ ಕಂಡುಬರುವ 'ರಾಮಕೃಷ್ಣಶ್ರುತಿ'ಯನ್ನು ಈ ಮೇಲಿನ ಸಂಗತಿಯ ವಿಸ್ತರಣೆಯಾಗಿಯೇ ಪರಿಗಣಿಸಬಹುದು. 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ ಕರ್ತೃ ಕುವೆಂಪು ತಮ್ಮನ್ನು ತಾವು ಗುರುತಿಸಿಕೊಂಡಿರುವುದು ಹೀಗೆ:

.... ... ತಾಯಿ ಹಸುಳೆಯನೆರ್ದೆಗೆ
ಒತ್ತುಕೊಳ್ವಂದದಿಂದಾತು ಪೊರೆಯಯ್, ಗುರುವೆ,
ಮಂತ್ರದೀಕ್ಷೆಯ ನಿಮ್ಮಡಿಯ ಶಿಷ್ಯಸಾಮಾನ್ಯನಂ,
ಮಾನ್ಯ ಕುಪ್ಪಳಿ ವೇಂಕಟಾರ್ಯಂಗೆ ಮೇಣ್ ಪೂಜ್ಯೆ
ಸೀತಮ್ಮನೆಂಬಭಿಧಾನದಾ ಮಾತೃದೇವತೆಗೆ
ಸಂಭವಿಸಿದೀ ಪುಣ್ಯನಂ, ಧನ್ಯನಂ, ದೀನನಂ:
ಕೌಸಲೆಯ ನಂದನಂ ಮೇಣ್ ದೇವಕಿಯ ಕಂದನುಂ
ತಾಮೊಂದೆ ಮೆಯ್ಯೊಳಿಂದವತಾರಮೆತ್ತಿದಾ
ಶ್ರೀರಾಮಕೃಷ್ಣ ಭಗವದ್‌ಗೋತ್ರಸಂಜಾತನಂ;....
ಭವತಾರಿಣೀ ತಾರಕಚರಣ ನಾಮರೂಪನಾ
ಶ್ರೀಶಿವಾನಂದ ಚಿತ್ಕರಣೋತ್ಥ ಹೃತ್ಕೇಂದ್ರನಂ!

(ಶ್ರೀಸಂಪುಟಂ, ಸಂಚಿಕೆ ೧ : ೮-೧೭, ೨೨-೨೩)

ಜಾತಿಮತಕುಲಗೋತ್ರಗಳ ಸಂಕೋಲೆಯಿಂದ ಹೊರಬರಬೇಕೆಂಬ ಅಭೀಪ್ಸೆಯನ್ನು ತಮ್ಮ ಜೀವನದುದ್ದಕ್ಕೂ ತೀವ್ರವಾಗಿ ಪ್ರಕಟಿಸಿದ ಕುವೆಂಪು ಇಲ್ಲಿ 'ಶ್ರೀರಾಮಕೃಷ್ಣ ಗೋತ್ರ'ವೆಂಬ ಹೊಸದೊಂದು ಗೋತ್ರದೊಂದಿಗೆ ತಮ್ಮನ್ನು ಗುರುತಿಸಿಕೊಂಡಿರುವುದು ಗಮನಿಸಬೇಕಾದ ಸಂಗತಿಯಾಗಿದೆ.' ಇತರೆಲ್ಲ ಗೋತ್ರಗಳನ್ನು ಮೀರಿದ್ದರ ಸಂಕೇತವಾಗಿಯೂ ಇದನ್ನು ಗ್ರಹಿಸಬಹುದು. ಅಲ್ಲದೆ ಕುವೆಂಪು ತಮ್ಮ ಕಾವ್ಯದೃಷ್ಟಿಯ ಮೂಲಸೆಲೆಯಾಗಿಯೂ ಶ್ರೀರಾಮಕೃಷ್ಣರನ್ನು ಗುರುತಿಸಿಕೊಂಡಿದ್ದಾರೆ:

ಶ್ರೀಗುರುದೇವನಿಗೆರಗುವೆನು;
ಗುರುಚರಣದಲಿ ನಾ ಕರಗುವೆನು!
... .... ....
ನನ್ನೆದೆಯಲಿ ಮನೆಮಾಡಿಹಗೆ,
ಕವಿತೆಯ ನೀಡಿಹಗೆ,
ಹರಿಹರ ರೂಪದ ಪಾವನಗೆ
ವಿಶ್ವವ ಕಾವನಿಗೆ;
ಯೋಗೀಶ್ವರನಿಗೆ,
ಜಗದೀಶ್ವರನಿಗೆ,
ಶ್ರೀರಾಮಕೃಷ್ಣ ದೇವನಿಗೆ!

(ಕುಟೀಚಕ : 'ಶ್ರೀಗುರುದೇವನಿಗೆರಗುವೆನು')

ಕುವೆಂಪು ಕಾವ್ಯರಾಶಿಯಲ್ಲಿ ಶ್ರೀರಾಮಕೃಷ್ಣರನ್ನು, ಅವರ ಭಾವಪರಿಸರವನ್ನು ಕೇಂದ್ರವಾಗಿ ಹೊಂದಿರುವ ಕವಿತೆಗಳು ವಿಪುಲವಾಗಿದ್ದು ಪ್ರತ್ಯೇಕವಾದ ವಿಸ್ತೃತ ಅಧ್ಯಯನಕ್ಕೆ ವಸ್ತುವನ್ನು ಒದಗಿಸುತ್ತವೆ. ದಿನಚರಿಯಲ್ಲಿರುವಂತೆಯೇ ಈ ಕವಿತೆಗಳಲ್ಲಿಯೂ ಪ್ರಾರ್ಥನೆಗಳಿವೆ, ಸ್ತೋತ್ರಗಳಿವೆ, ನಿವೇದನೆಗಳಿವೆ; ಶ್ರೀರಾಮಕೃಷ್ಣರ ಜೀವನಸನ್ನಿವೇಶಗಳನ್ನು ಆಧರಿಸಿರುವ ಕಥನ ಕವನಗಳಿವೆ; ಶ್ರೀರಾಮಕೃಷ್ಣರ ಅವತರಣವನ್ನು ಸಮಕಾಲೀನ ಸಂದರ್ಭದಲ್ಲಿ ವೈಚಾರಿಕವಾಗಿ ವಿಶ್ಲೇಷಿಸುವ 'ಶತಮಾನ ಸಂಧ್ಯೆ'ಯಂತಹ ಕವನವಿದೆ (ಅಗ್ನಿಹಂಸ). ಸಾಂದರ್ಭಿಕವಾಗಿ ಇದರ ಕೆಲವು ಸಾಲುಗಳನ್ನಿಲ್ಲಿ ಉಲ್ಲೇಖಿಸಬಹುದು:

ಕಾಲವ ದೇಶವನಳೆವರು;
ಆಕಾಶವ ತೂಗುವರು.
ಅತಿದೂರದ ನಕ್ಷತ್ರಕೆ
ಕ್ಷಣಮಾತ್ರದಿ ಸಾಗುವರು.
ಭುವಿಗರ್ಭಕೆ ರವಿಗರ್ಭಕೆ
ನೀಹಾರಿಗೂ ಹೊಕ್ಕು
ಸತ್ಯದ ಕರುಳನೆ ಕಿತ್ತಿದೆ
ವಿಜ್ಞಾನದ ರಣಹದ್ದಿನ
ನೆತ್ತರು ಬಸಿಯುವ ಕೊಕ್ಕು!

ನೋಣಮೀಸೆಯ ಹುಳುಹೆಜ್ಜೆಯ
ಎಣಿಸುವ ಬಿಜ್ಞೆಯು ಬಲ್ಲ;
ತನ್ನಾತ್ಮವ ತಾನರಿಯುವ
ಸಾಧನೆಯೊಂದನು ಒಲ್ಲ!
ಅನ್ವೇಷಣೆ ! ಅನ್ವೇಷಣೆ!
ಸುಖಿಸಲು ಪುರಸತ್ತಿಲ್ಲ!
ತಿಳಿದೂ ತಿಳಿದೂ ತಿಳಿದೂ
ಕಡೆಗೇನೂ ಗೊತ್ತಿಲ್ಲ !

ಆಧುನಿಕತೆಯ ಈ ದುರವಸ್ಥೆಗೆ ಪರಿಹಾರವನ್ನು ಶ್ರೀರಾಮಕೃಷ್ಣರ ಜೀವನ-ಸಂದೇಶಗಳಲ್ಲಿ ಈ ಕವಿತೆ ಕಂಡುಕೊಳ್ಳುತ್ತದೆ.

ಗುರುದೇವನ ಚೈತನ್ಯಕೆ
ನನ್ನುದ್ಧಾರವೆ ಸಾಕ್ಷಿ!
ನನ್ನಂತೆಯೆ ನಿಮ್ಮೆಲ್ಲರ
ಆತ್ಮೋದ್ಧಾರವು ಸಾಕ್ಷಿ!

ಎಂಬ ಭರವಸೆಯೂ ಕವಿತೆಯಲ್ಲಿ ವ್ಯಕ್ತವಾಗಿದೆ.

ಶ್ರೀರಾಮಕೃಷ್ಣರ ವ್ಯಕ್ತಿತ್ವ-ತತ್ತ್ವಗಳನ್ನು 'ಕುವೆಂಪುದರ್ಶನ' ಗ್ರಹಿಸಿರುವ ಬಗೆಯಲ್ಲಿ ಕಂಡುಬರುವ ಇನ್ನೊಂದು ವಿಶೇಷತೆಯನ್ನು ಈ ಸಂದರ್ಭದಲ್ಲಿ ಗಮನಿಸಬೇಕು. ಶ್ರೀರಾಮಕೃಷ್ಣ-ಸ್ವಾಮಿ ವಿವೇಕಾನಂದರ ಜೀವನಚರಿತ್ರೆಗಳನ್ನು ಕುವೆಂಪು ಬರೆದಿದ್ದಾರೆ. ಈ ಜೀವನಚರಿತ್ರೆಗಳಲ್ಲಿ ಇವರಿಬ್ಬರ ಜೀವನಗಳನ್ನೂ ಐತಿಹಾಸಿಕ ಪರಿಪ್ರೇಕ್ಷ್ಯದಲ್ಲಿಟ್ಟು ನೋಡಿರುವುದನ್ನು ನಾವು ಕಾಣುತ್ತೇವೆ. **ಶ್ರೀರಾಮಕೃಷ್ಣ ಪರಮಹಂಸ** ಗ್ರಂಥದ 'ಪೀಠಿಕೆ'ಯೂ **ಸ್ವಾಮಿ ವಿವೇಕಾನಂದ** ಗ್ರಂಥದ 'ಹಿನ್ನೆಲೆ' ಎಂಬ ಅಧ್ಯಾಯವೂ ಶ್ರೀರಾಮಕೃಷ್ಣರ ಜೀವನವನ್ನು—ಅಂತೆಯೇ ಸ್ವಾಮಿ ವಿವೇಕಾನಂದರದನ್ನು ಕೂಡ—ಬಿಡಿಯಾಗಿ ನೋಡದೆ ಕಾಲದ ಅಗತ್ಯವನ್ನು ಪೂರೈಸಲು ಉದ್ದೇಶಿಸಿದ ಘಟನಾ ಪ್ರಕ್ರಿಯೆಗಳ ಸಾರ್ಥಕ ಅಂತ್ಯವಾಗಿ ಪರಿಗಣಿಸಿವೆ. ಆ ಕಾಲದ ಜಾಗತಿಕ ಹಿನ್ನೆಲೆ, ಧಾರ್ಮಿಕ ಹಾಗೂ ಸಾಮಾಜಿಕ ಸುಧಾರಣೆಗಳು ಮತ್ತು ಚಳವಳಿಗಳು, ಅಂದಿನ ಮುಖಂಡರ ಮಹತ್ತ್ವ ಹಾಗೂ ಮಿತಿಗಳು ಇವುಗಳೆಲ್ಲವನ್ನೂ ನಿಖರವೂ ಸ್ಪಷ್ಟವೂ ಆದ ಇತಿಹಾಸಪ್ರಜ್ಞೆಯಿಂದ ವಿಶ್ಲೇಷಿಸುತ್ತ ರಾಮಕೃಷ್ಣರಿಗಾಗಿ ಇತಿಹಾಸವೇ ಹೇಗೆ ಹಸಿದು ಕುಳಿತಿತ್ತು ಎಂಬುದನ್ನು ಸಾಬೀತು ಪಡಿಸಲಾಗಿದೆ. ಇಲ್ಲಿಯ ವಿವರಗಳು ಶ್ರೀರಾಮಕೃಷ್ಣರನ್ನು ಈ 'ನೆಲ'ದ ಕೊರತೆಗಳನ್ನು ಪೂರೈಸುವ ಅಗತ್ಯವಾಗಿ ಕಂಡಿವೆ. ಹೀಗಾಗಿ ಶ್ರೀರಾಮಕೃಷ್ಣರು ಈ 'ಕಾಲ' ದವರು.

ಆದರೆ ಕುವೆಂಪು ಕಾವ್ಯದಲ್ಲಿ ಬರುವ ಶ್ರೀರಾಮಕೃಷ್ಣರಿಗೆ ಇನ್ನೊಂದು ಆಯಾಮವಿದೆ. ಅದು ಕಾಲ-ದೇಶಗಳನ್ನು ಮೀರಿದ ಆಯಾಮ.

**ಶಿರವ ನಾಕದೊಳಿರಿಸಿ ಚರಣಗಳೆರಡ ಭೂತಳದಿ**
**ಗುರು ಹಿಮಾಚಲದಂತೆ ನಿಂತಿಹೆ, ಶಾಂತಿಯಾಶ್ರಯನೆ....**
**ಕ್ರಿಸ್ತ ಮಹಮದ ರಾಮ ಕೃಷ್ಣ ಜೊರಾಸ್ತ ಗೌತಮರು**
**ದಿವ್ಯ ವೇದ ಕೊರಾನು ಬೈಬಲು ತಲ್ಮಡಾದಿಗಳು**
**ಗುಡಿಯು ಚರ್ಚು ಮಸೀದಿ ಆಶ್ರಮ ಅಗ್ನಿಪೂಜೆಗಳು**
**ಕಾಶಿ ಮಕ್ಕಗಳೆಲ್ಲ ನಿನ್ನೊಳಗೈಕ್ಯವಾ'ಗಿಹವು'!**

**(ಅಗ್ನಿಹಂಸ :ಶ್ರೀಗುರು)**

ಇಲ್ಲಿ ಶ್ರೀರಾಮಕೃಷ್ಣರು ಅಸ್ತಿತ್ವವೆಲ್ಲವನ್ನೂ ಒಂದುಗೂಡಿಸುವ ಆಧಾರವಾಗುತ್ತಾರೆ; ಕಾಲ-ದೇಶಗಳನ್ನು ತಮ್ಮಲ್ಲಿ ಒಗ್ಗೂಡಿಸಿಕೊಂಡು ಎಲ್ಲವನ್ನೂ ಮೀರುವ 'ತತ್ತ್ವ' ವಾಗುತ್ತಾರೆ. 'ಮೃಚ್ಛಕ್ತಿ'ಯನ್ನು ಮರ್ದಿಸುತ 'ಚಿಚ್ಛಕ್ತಿ'ಯನ್ನು ಸಂವರ್ಧಿಸುವ ಪ್ರಕ್ರಿಯೆಯ ಪ್ರಧಾನ ಉಪಕರಣವಾಗುತ್ತಾರೆ; 'ಉದ್ಧರಿಸು'ವುದಕ್ಕಾಗಿ ಕೆಳಗಿಳಿಯುವ 'ಅವತಾರ'ವಾಗುತ್ತಾರೆ. ಇದು ಸಮಸ್ತ ಅಸ್ತಿತ್ವದ ಅಗತ್ಯವಾಗಿರುವುದರಿಂದ, ಅವರು ಮೇಲ್ನೋಟಕ್ಕೆ ವ್ಯಷ್ಟಿಯಂತೆ ಕಂಡರೂ ಸಮಷ್ಟಿಯ ಪ್ರತಿನಿಧಿಯಾಗಿರುತ್ತಾರೆ.

**ಯುಗಯುಗದತಿ ಕಷ್ಟದಿ**
**ಜಡವನು ಜಯಿಸಿತು ಜೀವ:**
**ಬಹು ತಪದಿಂದಾ ಜೀವಕೆ**
**ಬಂದುದು ಮಾನವ ಭಾವ.**
**ಯುಗಯುಗ ಬೇಕೀ ಮನುಜತೆ**
**ಮಾನವತನವನೆ ಮೀರಿ**
**ದೇವತ್ವವ ಸಂಪಾದಿಸೆ**
**ಸಂಯಮ ಸ್ವರ್ಗಕ್ಕೇರಿ!**

**(ಅಗ್ನಿಹಂಸ :'ಶತಮಾನಸಂಧ್ಯೆ')**

ಈ ದೃಷ್ಟಿಯಿಂದ ಶ್ರೀರಾಮಕೃಷ್ಣರು ನೆಲ - ಬಾನುಗಳ ಸಂಗಮಬಿಂದು. ಅವರಿಗಾಗಿ (ಅಥವಾ 'ಅದಕ್ಕಾಗಿ')ನೆಲ ಕಾದು ಕುಳಿತದ್ದು ಇತಿಹಾಸ; ನೆಲದ ಅಗತ್ಯವನ್ನು ಪೂರೈಸಲು ಬಾನು ಸಂಕಲ್ಪಿಸಿದುದು ಪುರಾಣ. ಈ ಬಗೆಯ 'ಪುರಾಣೀಕರಣ'ವನ್ನು ಕುವೆಂಪು ಅವರ ಕಾವ್ಯದಲ್ಲೇ ಗುರುತಿಸಬಹುದು. ಅವರು ರಾಮಕೃಷ್ಣ-ವಿವೇಕಾನಂದರ ಜೀವನಚರಿತ್ರೆಗಳನ್ನು (ಅರ್ಥಾತ್ 'ಗದ್ಯಕೃತಿ'ಗಳನ್ನು) ಬರೆಯುವುದಕ್ಕೆ ಮೊದಲೇ ೧೯೨೮ರಷ್ಟು ಹಿಂದೆಯೇ, **ಮಹಾದರ್ಶನ** ಎಂಬ ಖಂಡಕಾವ್ಯವನ್ನು ರಚಿಸಿದ್ದರು (ಇದು ಪ್ರಕಟವಾದದ್ದು ಮಾತ್ರ ಮುಂದೆ ೧೯೬೮ರಲ್ಲಿ). ಕನ್ಯಾಕುಮಾರಿಯಲ್ಲಿ ಸ್ವಾಮಿ ವಿವೇಕಾನಂದರು ಮಾಡಿದ ಧ್ಯಾನ, ಪಡೆದ ದರ್ಶನ ಈ ಖಂಡಕಾವ್ಯದ ವಸ್ತು. **ಸ್ವಾಮಿ ವಿವೇಕಾನಂದ** ಜೀವನಚರಿತ್ರೆಯ 'ಯಾರಿವನು' ಎಂಬ ಪ್ರಾರಂಭದ ಅಧ್ಯಾಯಕ್ಕೂ ಈ ಖಂಡಕಾವ್ಯಕ್ಕೂ ಸಾಕಷ್ಟು ಸಮಾನಾಂತರತೆಯನ್ನು ಗುರುತಿಸಬಹುದು. ಇಲ್ಲಿಯೂ ಇತಿಹಾಸದ ಯುಗಗಳುದ್ದಕ್ಕೂ ಭಾರತದ ಏಳುಬೀಳುಗಳನ್ನು ಸ್ವಾಮೀಜಿ ದರ್ಶಿಸುತ್ತಾರೆ. ಆಧುನಿಕ ಭಾರತದ-ಭಾರತೀಯರ-ದುಃಸ್ಥಿತಿಯನ್ನು ಕಂಡು

ಮರುಗುತ್ತ ಇನ್ನೇನು ನಿರಾಶೆಯ ಕೂಪಕ್ಕೆ ಜಾರಬೇಕು ಎನ್ನುವಷ್ಟರಲ್ಲಿ ಅವರು ಕಾಣುವ ದರ್ಶನ ಇದು:

ದೂರದಲಿ, ಬಹುದೂರದಲಿ,
ಸಗ್ಗದಾಚೆಯಲಿ, ಸತ್ಯಲೋಕದಲಿ,
ಸೌಂದರ್ಯಯೋಗಿಗಳ ಸಿದ್ಧಿಯಾಲಯದಂತೆ
ಕಂಗೊಳಿಸಿ ಮೆರೆದು
ತಾರಕಿತ ವೈಭವದಿ ಶೋಭಿಸುವ ಕೈಲಾಸ ವೈಕುಂಠಗಳಲಿ
ಮುನಿಯೋಗಿ, ವೀರವರರಾಚಾರ್ಯ ಕವಿತಿಲಕ ಬುದ್ಧಜನರೆಲ್ಲ,
ಸಿದ್ಧಯಕ್ಷರು ಗರುಡ ಗಂಧರ್ವ ಕಿಂಪುರುಷ ಕಿನ್ನರರ ಕೂಡಿ
ಕೈಮುಗಿದು ಸಾಲಾಗಿ ನಿಂತೀಶನಂ ಬೇಡಿದರು ಹಾಡಿ ಹಾಡಿ,
ಗ್ರಹಸಿಕರ ಹಾಡಿದುವು ಬೇಡಿಕೆಯ ಕೂಡಿದುವು
ಮರುದನಿಯ ನೀಡಿ
ಬೆದರಿದಿಳೆಗಭಯಮಂ ಸೂಸಿತಾ ಬಿನ್ನಹದ ಸುರಗಾನಗಂಗೆ:
"ಸಾಕು ನಮಗೀ ಸುಖಂ, ಸಾಕು ಪರಮಾನಂದ,
ಕಳುಹೆಮ್ಮ ತಿರೆಗೆ.
ಭೂದೇವಿಯಳುತಿರುವಳಳಲಿನಲಿ,
ಭಾರತಿಯು ಗೋಳಾಡುತಿಹಳು,
ನಿಜಧರ್ಮವಳಿದಿಹುದು; ಮಾನವರು ಬಳಲಿಹರು
ಬರಿದೆ ಹೋರಾಡಿ !..."

ಈ ಬಿನ್ನಹಕ್ಕೆ ದೇವವಾಣಿ ಉತ್ತರವನ್ನು ಕೊಡುತ್ತದೆ:

ಭೀತಿ ನಿಮಗೇಕಮೃತಪುತ್ರರಿರ ನಾನಿರಲು,
ಧೈರ್ಯಮಂ ತಾಳಿ;
ಹಿಂದೆ ಪಾರ್ಥಗೆ ಕೊಟ್ಟ ಭಾಷೆಯಂ ಸಲ್ಲಿಸುವೆ,
ಮರಳಿಯವತರಿಸಿ!
ಕೇಡಿಗಳನಳಿಸುವೆಂ, ಸಾಧುಗಳನುಳಿಸುವೆಂ,
ವಸುಧೆಯಂ ಪೊರೆವೆ
ಭಾರತಾಂಬೆಗೆ ಸುಖವನೀಯುವೆಂ,
ಧರ್ಮಸಂಸ್ಥಾಪನೆಯ ಮಾಡೆ
ಶ್ರೀರಾಮಕೃಷ್ಣಾಭಿಧಾನದಲಿ
ಮಂಗಳದ ವಂಗಸುತೆಯಲ್ಲಿ
ಜನಿಸುವೆಂ ಖುದಿರಾಮಚಂದ್ರಮಣಿದೇವಿಯ
ಬಸಿರಿನಲಿ ಬಂದು
ಬಡತನದೊಳೇಳುವೆಂ, ಕೌತುಕವ ನೀಡುವೆಂ
ಮಾನವರಿಗೆಲ್ಲ.

(ಸಾಲುಗಳು : ೬೩೯-೬೫೯, ೬೭೫-೬೮೧)

ಇಲ್ಲಿನ 'ಸಗ್ಗದಾಚೆಯ ಸತ್ಯಲೋಕ', ಸಿದ್ಧ-ಯಕ್ಷ-ಗರುಡ-ಗಂಧರ್ವ-ಕಿನ್ನರ-ಕಿಂಪುರುಷ ಸಮೂಹ, ಅವರ ಬಿನ್ನಹ, ಅದಕ್ಕೆ ದೇವವಾಣಿ ಉತ್ತರವನ್ನು ಕೊಡುವ ರೀತಿ ಇವೆಲ್ಲವೂ ಪುರಾಣಕ್ಕೆ ಅಗತ್ಯವಾದ ಪರಿಸರವನ್ನು ನಿರ್ಮಿಸುತ್ತವೆ. ಈ ಹಿನ್ನೆಲೆಯಲ್ಲಿ ಕುವೆಂಪು ಅವರ ಗದ್ಯಕೃತಿಗಳ ಶ್ರೀರಾಮ

**✻ ಕುವೆಂಪು ಅವರ ಗದ್ಯಕೃತಿಗಳ ಶ್ರೀರಾಮಕೃಷ್ಣರು ನೆಲದವರಾದರೆ, ಕಾವ್ಯದಲ್ಲಿ ಮೂಡುವ ಶ್ರೀರಾಮ ಕೃಷ್ಣರು ಭುವಿದಿವಿಗಳ ನಡುವಿನ ಸೇತುವೆಯಾಗುವವರು ಎಂಬುದನ್ನು ಗಮನಿಸಬಹುದಾಗಿದೆ. ✻**

ಕೃಷ್ಣರು ನೆಲದವರಾದರೆ, ಕಾವ್ಯದಲ್ಲಿ ಮೂಡುವ ಶ್ರೀರಾಮ ಕೃಷ್ಣರು ಭುವಿ-ದಿವಿಗಳ ನಡುವಿನ ಸೇತುವೆಯಾಗುವವರು ಎಂಬುದನ್ನು ಗಮನಿಸಬಹುದಾಗಿದೆ.

ಇವಿಷ್ಟು ಈ ಸಂಗತಿಯ ಒಂದು ನೆಲೆಯಾದರೆ, ಇದರ ಇನ್ನೊಂದು ನೆಲೆ ಹೀಗಿದೆ. ಶ್ರೀರಾಮಕೃಷ್ಣರು ತಮ್ಮ ಲೌಕಿಕ ಅಸ್ತಿತ್ವದಲ್ಲಿಯೂ ಅಲೌಕಿಕ ಪ್ರಭೆಯನ್ನು ಬೆಳಗಿದವರು. ಕೆಲವೊಮ್ಮೆ ತಮ್ಮ ವಾಸ್ತವ ಬದುಕನ್ನೇ ಪ್ರತಿಮಾತ್ಮಕವಾಗಿಸಿದವರು. ಅವರ ಜೀವನ-ಸಂದೇಶ-ಸಿದ್ಧಿಗಳಲ್ಲಿ ಅತೀಂದ್ರಿಯವೆನಿಸುವ ವಿವರಗಳು ಐಂದ್ರಿಯಕ ವಿವರಗಳೊಂದಿಗೆ ಸಹಜವಾಗಿ ಹೆಣೆದುಕೊಂಡುಬಿಟ್ಟಿವೆ. ಈ 'ಹೆಣಿಕೆ'ಯನ್ನು ಕುವೆಂಪು ತಮ್ಮ ಕಾವ್ಯನಿರ್ಮಿತಿಯಲ್ಲಿ ಬಳಸಿಕೊಂಡಿರುವುದನ್ನು ಗುರುತಿಸಲು ಸಾಧ್ಯವಿದೆ. ಶ್ರೀರಾಮ ಕೃಷ್ಣರ ಜನನಸಂದರ್ಭದೊಂದಿಗೆ ಸೇರಿಕೊಂಡಿರುವ ಅಲೌಕಿಕ ಸಂಗತಿಗಳನ್ನು ಅವರು ಶ್ರೀರಾಮಾಯಣದರ್ಶನದಲ್ಲಿ ಶ್ರೀರಾಮನ ಜನನದ ಸಂಗತಿಗಳೊಂದಿಗೆ ಜೋಡಿಸುತ್ತಾರೆ.

ಒಮ್ಮೆ ಆ ಹೂಹಗುರ ಶಿಶುವಿದ್ದಕಿದ್ದಂತೆ
ಗಿರಿಭಾರಮಾಗಿ ಬರೆ, ನೆಗಹಲಾರದೆ ತಾಯಿ
ತೇಂಕಿದಳು, ಕಾತರಿಸಿ ಮಗನಭ್ಯುದಯ ಶಂಕೆಯಿಂ.
ಮತ್ತೊರ್ಮೆ ಪಚ್ಚೆದೊಟ್ಟಿಲ್ ಬಿಂಬದಲಿ ತನ್ನ
ಮುದ್ದುಕಂದಗೆ ಬದಲ್ ಕಾಣಿಸೆ ಮಹಾಮೂರ್ತಿ
ಕೂಗಿಕೊಂಡಳು ದುಷ್ಟ ಕುಗ್ರಹಚೇಷ್ಟೆಯುಂದಳ್ಕಿ

(ಅಯೋಧ್ಯಾಸಂಪುಟಂ: ಕವಿಕ್ರತುದರ್ಶನಂ: ೪೬೧-೪೬೬)

ಇದನ್ನು ಶ್ರೀರಾಮಕೃಷ್ಣರ ಶೈಶವದ ವಿವರಗಳ ಜೊತೆ ಗಿಟ್ಟು ನೋಡಬಹುದು (ಶ್ರೀರಾಮಕೃಷ್ಣ ಪರಮಹಂಸ, 'ಉದಯ',೧೯೭೩,ಪು.೧೯). ಅಲ್ಲದೆ ಶ್ರೀರಾಮಾಯಣ ದರ್ಶನದಲ್ಲಿ ಹಲವಾರು ಕಡೆ ಬರುವ ಶ್ರೀರಾಮನ ಸಮಾಧಿ ಸ್ಥಿತಿ, ಆಂಜನೇಯನ ಆಧ್ಯಾತ್ಮಿಕ ಅನುಭವ, ರಾವಣನ ದರ್ಶನ ಪರಮಹಂಸರ ಅನುಭವಗಳ ಪ್ರತಿಕೃತಿಗಳೆಂಬಂತೆ ಚಿತ್ರಿತ ವಾಗಿವೆ.[2] ಇದಲ್ಲದೆ ಬಾಲಕ ಗದಾಧರನಿಗೆ ಉಂಟಾದ ಮೊದಲ ಭಾವಾವಸ್ಥೆಯ ವಿವರಗಳೊಂದಿಗೆ ಕುವೆಂಪು ಅವರ 'ದೇವರು ರುಜುಮಾಡಿದನು' (ಪಕ್ಷಿಕಾಶಿ) ಕವನದ ಅನುಭವವನ್ನಿಟ್ಟು ನೋಡಿದಾಗ ಅವೆರಡರ ನಡುವಣ ಸಮಾನಾಂತರತೆ ಗೋಚರವಾಗುವುದನ್ನೂ ಗುರುತಿಸಬಹುದು[3]. ಇವೆಲ್ಲದರ ಪರಿಶೀಲನೆಯಿಂದ ಹೊರಪಡುವ ಒಂದು ವಿಚಾರವೆಂದರೆ ಕುವೆಂಪು ಸಾಹಿತ್ಯರಾಶಿಯಲ್ಲಿ ಶ್ರೀರಾಮಕೃಷ್ಣರು ಕಾವ್ಯ ವಸ್ತು-

ಅನುಭವ-ಸಂವೇದನೆಗಳ ಭಾಗವಾಗಿಯೂ ಸ್ವೀಕೃತರಾಗಿದ್ದಾರೆ ಎನ್ನುವುದು.

ಕುವೆಂಪು ಅವರ 'ಆಧ್ಯಾತ್ಮಿಕ ವೈಚಾರಿಕತೆ'ಗೂ (ಅದನ್ನು ಹಾಗೆಂದು ಕರೆಯಬಹುದಾದರೆ,) ರಾಮಕೃಷ್ಣ-ವಿವೇಕಾನಂದ ವಿಚಾರಪ್ರಣಾಳಿಗೂ ಇರುವ ಸಂಬಂಧದ ಸ್ವರೂಪದ ಬಗೆಗೆ ವಿಸ್ತೃತವಾದ ಅಧ್ಯಯನವೊಂದು ಆಗಬೇಕಾಗಿದೆ. ಅದೇನೇ ಇದ್ದರೂ, ಸ್ವಾಮಿ ವಿವೇಕಾನಂದ ಜೀವನಚರಿತ್ರೆಯ 'ಕರೆಯುತಿದೆ ಯುಗವಾಣಿ' ಎಂಬ ಕೊನೆಯ ಅಧ್ಯಾಯದಲ್ಲಿಯೂ ಇನ್ನಿತರ ಕೆಲವು ಮುನ್ನುಡಿಗಳಲ್ಲಿಯೂ ಕುವೆಂಪು ವೈಚಾರಿಕತೆಯ ಕೆಲವು ಪ್ರಾತಿನಿಧಿಕ ಲಕ್ಷಣಗಳನ್ನು ಗುರುತಿಸಲು ಸಾಧ್ಯವಿದೆ. ಶ್ರೀರಾಮಕೃಷ್ಣರನ್ನು (ಅಂತೆಯೇ ಸ್ವಾಮಿ ವಿವೇಕಾನಂದರನ್ನು) ಭಾವ-ಬುದ್ಧಿಗಳ ಸಮನ್ವಯದಲ್ಲಿ ಸ್ವೀಕರಿಸಿರುವುದು ಕುವೆಂಪು ಜೀವನ-ಸಾಹಿತ್ಯಗಳ ಮುಖ್ಯ ನೆಲೆಯಾಗಿದೆ. **ಶ್ಮಶಾನ ಕುರುಕ್ಷೇತ್ರಂ** ನಾಟಕದಲ್ಲಿ (ಹತ್ತನೆಯ ದೃಶ್ಯ) ಕೃಷ್ಣನು ರುದ್ರನಿಗೆ 'ಕಲಿಯುಗ ಮಹಾಕಾವ್ಯ'ವನ್ನು ನಿರೂಪಿಸುವಾಗ ಶ್ರೀರಾಮಕೃಷ್ಣ ಪರಮಹಂಸರ ಪ್ರಸ್ತಾವ ಬಂದೊಡನೆಯೇ ಅವರಿಗೆ ರುದ್ರನೂ ಕೃಷ್ಣನೂ ನಮಸ್ಕರಿಸುವಂತೆ ಮಾಡಿರುವುದರಲ್ಲಿ, ಕುವೆಂಪು ದರ್ಶನದಲ್ಲಿ ಶ್ರೀರಾಮಕೃಷ್ಣರ ಸ್ಥಾನವನ್ನು ಪ್ರತೀಕಾತ್ಮಕವಾಗಿ ಗ್ರಹಿಸಬಹುದಾಗಿದೆ.

ಟಿಪ್ಪಣಿಗಳು:

1. ಈ ಸೂಚನೆಯನ್ನು ಕೊಟ್ಟವರು ಡಾ.ಪ್ರಭುಶಂಕರ ಅವರು.
2. ಉದಾಹರಣೆಗೆ ನೋಡಿ, 'ರಸಮಲ್ತೆ ರುದ್ರದೃಷ್ಟಿಗೆ ರೌದ್ರಮುಂ':೫೧೦-೫೧೮, 'ಮಡಿದನಿಂದ್ರ ಜಿತು ಐಂದ್ರಾಸ್ತ್ರದಿಂ': ೪೦೩-೪೧೫, 'ಶ್ರೀರಾಮರಾವಣ ಚಿತ್‌ತಪಸ್‌ಶ್ರೀ': ೩೨೨-೩೨೪, 'ದಶಾನನ ಸ್ವಪ್ನಸಿದ್ಧಿ': ೨೩೫ ೨೪೩, 'ದೈತ್ಯನೇರ್ದನ್ ಚೈತ್ಯಮಂಚಮಂ': ೮೮-೯೪.
3. ಗದಾಧರನ ಭಾವಾವಸ್ಥೆಯ ನಿರೂಪಣೆಯೊಂದಿಗೆ ಆ ಕುರಿತ ಕುವೆಂಪು ಅವರ ವ್ಯಾಖ್ಯಾನವನ್ನೂ (ಅಲ್ಲೇ) ಸ್ವಾರಸ್ಯಕ್ಕಾಗಿ ಗಮನಿಸಬಹುದು.
4. ವಿಶ್ವಮಾನವಸಂದೇಶ ಸೂತ್ರ ೪ : "'ಮತ' ತೊಲಗಿ 'ಅಧ್ಯಾತ್ಮ' ಮಾತ್ರ ವೈಜ್ಞಾನಿಕ ತತ್ತ್ವವಾಗಿ ಮಾನ್ಯತೆ ಪಡೆಯಬೇಕು."

✡

## ಹದಿನಾರಾಣೆಯ ಬ್ರಾಹ್ಮಣ

ಟಿ.ಎಸ್. ವೆಂಕಣ್ಣಯ್ಯನವರ ಸಂಬಂಧಿಗಳೊಬ್ಬರಿದ್ದರು. ಅವರು ಆಗಾಗ್ಗೆ ಇವರ ಮನೆಗೆ ಬಂದು ಹೋಗುವ ಪರಿಪಾಠ. ವಯಸ್ಸಾಗಿದ್ದುದರಿಂದ ಎಲ್ಲರೂ ಅವರನ್ನು ದೊಡ್ಡಪ್ಪ ಎಂದೇ ಕರೆಯುತ್ತಿದ್ದರು. ಮಹಾ ಸಂಪ್ರದಾಯವಾದಿ.

ತ.ಸು.ಶಾಮರಾಯರು ಒಮ್ಮೆ ಉಪನಿಷತ್ತಿನ ಪುಸ್ತಕವನ್ನು ಓದುತ್ತಿದ್ದಾಗ 'ಯಾರೋ ಅದು ಪುಟ್ಟಪ್ಪ ಅನ್ನುವವರು' ಎಂದು ಕೇಳಿದರು. "ಅದೇ ನಮ್ಮ ಪ್ರಾಧ್ಯಾಪಕರು, ದೊಡ್ಡ ಕವಿಗಳು" ಎಂದರು ತ.ಸು.ಶಾಮರಾಯರು. "ಅವರೇನು ಸ್ಮಾರ್ತರೋ, ವೈಷ್ಣವರೋ?" ಎಂಬ ಪ್ರಶ್ನೆಗೆ "ಎರಡೂ ಅಲ್ಲ, ಒಕ್ಕಲಿಗರು" ಎಂದರು ತ.ಸು.ಶಾಮರಾಯರು. "ನಿನಗೇನು ಗೊತ್ತು? ಶಂಕರಾಚಾರ್ಯ, ಅದ್ವೈತ ವೇದಾಂತವನ್ನೆಲ್ಲಾ ಆತ ಓದಿರಬೇಕಾದರೆ ಆತ ಸ್ಮಾರ್ತಬ್ರಾಹ್ಮಣನೇ ಸರಿ" ಎಂದರು ದೊಡ್ಡಪ್ಪ. "ಇಲ್ಲ, ಅವರು ಬ್ರಾಹ್ಮಣರಲ್ಲ ಒಕ್ಕಲಿಗರು" ಎಂದೇ ವಾದಿಸಿದರು ತ.ಸು.ಶಾ. "ನಿನಗೇನು ಗೊತ್ತು ಕೂತ್ಕೊ" ಎಂದು ಬೈದು ಕೂಡಿಸಿದರು ದೊಡ್ಡಪ್ಪ. ಮಧ್ಯಾಹ್ನದ ಊಟದ ವೇಳೆಯಲ್ಲಿ ಈ ವಿಚಾರವನ್ನು ಎತ್ತಿ ದೊಡ್ಡಪ್ಪನಿಗೆ ಮುಖದ ನೀರಿಳಿಸಬೇಕೆಂದುಕೊಂಡು, ಟಿ.ಎಸ್.ವೆಂಕಣ್ಣಯ್ಯನವರನ್ನು ಕೇಳಿದರು. ಆಗ ವೆಂಕಣ್ಣಯ್ಯನವರು "ಹೌದು ಪುಟ್ಟಪ್ಪ ಬ್ರಾಹ್ಮಣ, ಹದಿನಾರಾಣೆಯ ಬ್ರಾಹ್ಮಣ" ಎಂದಾಗ ತೇಜೋವಧೆಯಾದದ್ದೇನೋ ನಿಜ, ಆದರೆ ದೊಡ್ಡಪ್ಪನಿಗಲ್ಲ ಈ ಶಾಮರಾಯರಿಗೆ. ದೊಡ್ಡಪ್ಪ ಗೆದ್ದ ಹುಂಜದಂತೆ ಕ್ಕೊ...ಕ್ಕೊ... ಕ್ಕೋ.... ಎಂದು ಮೀಸೆ ಕುಣಿಸಿ ನಕ್ಕರು. ಸಂಜೆ ವಾಕಿಂಗ್ ಹೋದಾಗ ಶಾಮರಾಯರು ಪುನಃ ಈ ವಿಚಾರವನ್ನು ವೆಂಕಣ್ಣಯ್ಯನವರೊಡನೆ ಎತ್ತಿ "ಸತ್ಯಕ್ಕೆ ಅಪಚಾರ ಮಾಡಿದಿರಿ. ಪುಟ್ಟಪ್ಪನವರನ್ನು ಬ್ರಾಹ್ಮಣರೆಂದು ಏಕೆ ಕರೆದಿರಿ?" ಎಂದು ಪ್ರಶ್ನಿಸಿದರು. "ಹೌದಯ್ಯ ಪುಟ್ಟಪ್ಪ ಬ್ರಾಹ್ಮಣನಲ್ಲವೆ? ಬ್ರಾಹ್ಮಣನೆಂದರೆ ಏನೆಂದು ತಿಳಿದುಕೊಂಡಿದ್ದೀಯ? ಗೀತೆಯಲ್ಲಿ ಶ್ರೀಕೃಷ್ಣ ಹೇಳಿಲ್ಲವೇ, '**ಚಾತುರ್ವರ್ಣ್ಯಂ ಮಯಾ ಸೃಷ್ಟ್ಯಂ ಗುಣಕರ್ಮವಿಭಾಗಶಃ**' ವರ್ಣಭೇದವಿರುವುದು ಹುಟ್ಟಿನಿಂದಲ್ಲ, ಗುಣಕರ್ಮಗಳಲ್ಲಿ. ಬ್ರಾಹ್ಮಣನ ಗುಣಕರ್ಮಗಳು ಯಾವುದು ಎಂದು ಹೇಳಿದೆಯೋ ಅವೆಲ್ಲವೂ ಪುಟ್ಟಪ್ಪನವರಲ್ಲಿ ಇವೆ. ಈ ಅರ್ಥದಲ್ಲೇ ನಾನು ಪುಟ್ಟಪ್ಪನವರನ್ನು ಬ್ರಾಹ್ಮಣನೆಂದು ಕರೆದದ್ದು" ಎಂದರು ಟಿ.ಎಸ್. ವೆಂಕಣ್ಣಯ್ಯ. ಹೀಗೆ ಅವರು ಪುಟ್ಟಪ್ಪನವರಲ್ಲಿ ತಮ್ಮ ಶಿಷ್ಯ ವಾಂಛಲ್ಯವನ್ನು ಇಟ್ಟುಕೊಂಡಿದ್ದರಿಂದಲೇ ಪುಟ್ಟಪ್ಪನವರು ತಮ್ಮ ರಾಮಾಯಣದರ್ಶನಂ ಕಾವ್ಯ ಬರೆದುದನ್ನು ಟಿ.ಎಸ್. ವೆಂಕಣ್ಣಯ್ಯನವರಿಗೇ ಅರ್ಪಿಸಿದ್ದಾರೆ.

ಇದೊ ಮುಗಿಸಿ ತಂದಿಹೆನ್ ಈ ಬೃಹದ್ ಗಾನಮಂ
ನಿಮ್ಮ ಸಿರಿಯಡಿಗೊಪ್ಪಿಸಲ್ಕೆ, ಓ ಪ್ರಿಯ ಗುರುವೆ.
ಕರುಣಿಸಿಂ ನಿಮ್ಮ ಹರಕೆಯ ಬಲದ ಶಿಷ್ಯನಂ.

(ಸಂಗ್ರಹ : ತ.ಸು. ಶಾಮರಾಯರ *ಮೂರು ತಲೆಮಾರು* ಕೃತಿಯಿಂದ)

*ಪ್ರಾಯೋಜಕರು* : ಕೆ. ಸುಬ್ಬಣ್ಣ, # 15 G - 6th ಸ್ಟ್ರೀಟ್, ಜೋಗುಪಾಳ್ಯಂ
ಅಲಸೂರು, ಬೆಂಗಳೂರು –560 010